# BY RPAD

ಸಂಖ್ಯೆ: ಆಡಳಿತ/ನೇ/ಟಿ/8346/2021

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ,
ಮೈಸೂರು, ದಿನಾಂಕ: 17.04.2021.

## ಸೂಚನಾ ಪತ್ರ

ದಿನಾಂಕ **01.04.2021**ರ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆಡಳಿತ/ನೇ/ಟಿ/**7338/2021** ರ ಅನ್ವಯ ನೀವು ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಬೆರಳಚ್ಚುಗಾರರ ಹುದ್ದೆಗೆ ಆಯ್ಕೆಯಾಗಿದ್ದು, ಮೂಲ ಪಟ್ಟಿಯಲ್ಲಿನ ಅಭ್ಯರ್ಥಿಯ ಆಯ್ಕೆ ರದ್ದಾಗಿರುವುದರಿಂದ, ಅದೇ ಮೀಸಲಾತಿಯಡಿಯಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ನಿಮ್ಮನ್ನು ದಿನಾಂಕ **17.04.2021** ರ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಆಡಳಿತ/ನೇ/ಟಿ/8345/**2021**ರ ಅನ್ವಯ ಈ ಘಟಕದಲ್ಲಿನ ಬೆರಳಚ್ಚುಗಾರರ ಹುದ್ದೆಗೆ ಆಯ್ಕೆ ಮಾಡಲಾಗಿರುತ್ತದೆ.

ಆದ್ದರಿಂದ, ದಿನಾಂಕ 20.04.2021ರ ಮಂಗಳವಾರ ಪೂರ್ವಾಹ್ನ 10:30 ಗಂಟೆಗೆ ನೇಮಕಾತಿ ವಿಭಾಗ, ನ್ಯಾಯಾಲಯಗಳ ಸಂಕೀರ್ಣ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಮೈಸೂರು, ಇಲ್ಲಿ ಹಾಜರಾಗಿ, ನೀವು ಅರ್ಜಿಯಲ್ಲಿ ನಮೂದಿಸಿದ್ದ ಎಲ್ಲಾ ದಾಖಲಾತಿಗಳ ಮೂಲ ದಾಖಲಾತಿಗಳನ್ನು ಸುರಕ್ಷಿತವಾದ ಕಡತದಲ್ಲಿ **(ಫೈಲ್)** ಮುಂದಿನ ಪರಿಶೀಲನೆಗಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ. ಎಲ್ಲಾ ಮೂಲ ದಾಖಲಾತಿಗಳ ಸ್ವ-ದೃಢೀಕೃತ ನಕಲುಗಳನ್ನು ಮತ್ತು ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 3 ಭಾವಚಿತ್ರಗಳನ್ನು **(ಫೋಟೋ)** ಹಾಗೂ ನಿಮ್ಮ ಜನ್ಮ ದಿನಾಂಕದಿಂದ ಇಂದಿನವರೆಗೂ ನೀವು ವಾಸವಾಗಿರುವ ವಾಸ ಸ್ಥಳದ ವಿಳಾಸಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದು ನಿಮ್ಮ ಸಹಿ ಮಾಡಿ ಸಲ್ಲಿಸತಕ್ಕದ್ದು.

ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಿರತಕ್ಕದ್ದು.

ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ನಡತೆ ಪ್ರಮಾಣ ಪತ್ರಗಳು (ಸರ್ಕಾರಿ ಉದ್ಯೋಗಕ್ಕೆ) ಮತ್ತು ಸರ್ಕಾರಿ ವೈದ್ಯರಿಂದ ಪಡೆದ ಶಾರೀರಿಕ ಸುಸ್ಥಿತಿಯ ಪ್ರಮಾಣ ಪತ್ರವನ್ನು (ಸರ್ಕಾರಿ ಉದ್ಯೋಗಕ್ಕೆ) ಹಾಜರುಪಡಿಸತಕ್ಕದ್ದು. ಸದರಿ ದಿನದಂದು ನೀವು ಹಾಜರಾಗದಿದ್ದಲ್ಲಿ, ನಿಮ್ಮ ಆಯ್ಕೆಯನ್ನು ರದ್ದುಪಡಿಸಲಾಗುವುದು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ
ಆದೇಶದ ಮೇರೆಗೆ,

ಮುಖ್ಯ ಆಡಳಿತಾಧಿಕಾರಿಗಳು,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಮೈಸೂರು.

To,

**Manjushree T.V.**
**D/o Vittoba R.**
**C/o Huchaiah,**
**R/at #12/1, 4th Main, Pipeline, Srinagar,**
**Behind Mahadeshwara Temple,**
**Bengaluru Taluk & District-560050.**